ರಾಜ್ಯಪಾಲರ ಭಾಷಣದಿಂದ ಬಂದಿರುವ ಉತ್ತರಗಳು ನಮಗೆ ತೃಪ್ತಿ ತಂದಿಲ್ಲ. ಇದನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ. ಈ ಹಂತದಲ್ಲಿ.

ಈ ಹಂತದಲ್ಲಿ ಕೆ.ಜೆ.ಪಿ.ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು

ಅಧ್ಯಕ್ಷರು : ಮಾನ್ಯ ಮಖ್ಯಮಂತ್ರಿಗಳು ನಿಮಗೆ ಉತ್ತರ ಹೇಳುವುದು ಬೇಡವೆ? ಇದು ಒಳ್ಳೆಯ ಕಥೆಯಾಯಿತಲ್ಲಾ?

ಶ್ರೀ ಸಿದ್ದರಾಮಯ್ಯ(ಮುಖ್ಯಮಂತ್ರಿಗಳು):–ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ಬಹಳ ಸೀನಿಯರ್ ಲೀಡರ್. ನಾನು ಉತ್ತರ ಹೇಳುವುದಕ್ಕೆ ಮುಂಚಿತವಾಗಿಯೇ ಅವರು ವಾಕ್‌ಔಟ್ ಮಾಡುತ್ತಿದ್ದಾರೆಂದರೆ ಇದು ರಾಜಕಾರಣವೇ. ಅವರಿಗೆ ನಾನು ಕೊಡಬೇಕಾದ ಯತ್ತರವನ್ನು ಕೇಳಲು ಅವರು ತಯಾರಾಗಿಲ್ಲ. ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾತನಾಡುತ್ತಾ ಮನೆಗಳಿಗೆ ಕೊಡುವ 45 ಸಾವಿರ ಸಬ್ಸಿಡಿ ಬಗ್ಗೆ ಹೇಳಿದ್ದಾರೆ, ಅದನ್ನು ನಾನು ಈ ವರ್ಷ ಮಂಜೂರಾಗತಕ್ಕಂಥ ಮನೆಗಳಿಗೆ ನಾನು ಹೇಳಿರುವುದು. ಈಗಾಗಲೇ ಪ್ರಾರಂಭವಾಗಿರತಕ್ಕಂಥದ್ದು, ವಿವಿಧ ಹಂತಗಳಲ್ಲಿರತಕ್ಕಂಥವುಗಳಿಗೆ ಕೊಡುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು :– ಅದರಲ್ಲಿ ಒಂದು ಪ್ರಶ್ನೆಯೇನೆಂದರೆ ಲಾಕ್ ಮಾಡಿಬಿಟ್ಟಿದ್ದಾರೆ. ಅದನ್ನು unlock ಮಾಡಬೇಕು.

ಶ್ರೀ ಸಿದ್ದರಾಮಯ್ಯ :–ಅದನ್ನು ಮುಂದುವರಿಸುವುದಕ್ಕೆ ಮುಂದಿನ ವರ್ಷಕ್ಕೆ ಅದನ್ನೂ ಸೇರಿಸಿಕೊಂಡು ಮಾಡುವ ಹಾಗೆ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ :–ಈಗಾಗಲೇ ಮನೆಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿಬಿಟ್ಟಿದ್ದಾರೆ.

ಅಧ್ಯಕ್ಷರು :–ಹಿಂದೆ 75 ಸಾವಿರಕ್ಕೆ ಎಂದು ಏನಿತ್ತಲ್ಲ, ಅದರಲ್ಲಿಯೇ ಅವರು ಪೂರೈಸಿಕೊಳ್ಳುತ್ತಾರೆ, uniock ಮಾಡಿಬಿಟ್ಟರೆ ಸಾಕು.

ಶ್ರೀ ಸಿದ್ದರಾಮಯ್ಯ :–ಈಗ ಅವುಗಳನ್ನೂ ಕೂಡ ಮುಂದಿನ ವರ್ಷ ಮನೆಗಳನ್ನು ಸ್ಯಾಂಕ್ಷನ್ ಮಾಡುತ್ತೇವಲ್ಲ, ಆಗ ಅದನ್ನು ಸೇರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ಕಾರ್‌ಜೋಳ್‌ರವರೆ ನೀವು ಕೆಲವನ್ನೆಲ್ಲಾ ಹೇಳಿದ್ದೀರಲ್ಲಾ, ಆ ಹಾಸ್ಟೆಲ್‌ಗಳಿದ್ದು, ಜಮೀನಿನ ಬೆಲೆ ಜಾಸ್ತಿ ಮಾಡುವುದು, ಇದರ ಬಗ್ಗೆ ಬಜೆಟ್ ಮಂಡಿಸುವಾಗ ಪರಿಶೀಲನೆ ಮಾಡುತ್ತೇನೆ. ಆಮೇಲೆ ಪಿ.ಎಲ್.ಡಿ. ಬ್ಯಾಂಕ್‌ಗಳ ಸಾಲದ ಬಗ್ಗೆ ಹೇಳಿದ್ದೀರಲ್ಲಾ, ಆ ಪಿಎಲ್‌ಡಿ ಬ್ಯಾಂಕ್‌ನಲ್ಲಿ